**CCE RR**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2015**

**S. S. L. C. EXAMINATION, JUNE, 2015**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 18. 06. 2015 ] **ಸಂಕೇತ ಸಂಖ್ಯೆ : 33-K**

Date : 18. 06. 2015 ] **CODE No. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**( ಹೊಸ ಪಠ್ಯಕ್ರಮ / New Syllabus )**

**( ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater )**

[ ಪರಮಾವಧಿ ಅಂಕಗಳು : 80

[ Maximum Marks : 80

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 8 × 1 = 8 |
| 1. | ಮುತ್ತಜ್ಜನಿಂದ (ಗ್ವಾಲಿಯರ್‌ನಲ್ಲಿ ಪ್ರಧಾನ ಪುರೋಹಿತರಾಗಿ ದ್ರಾವಿಡ್ ಸಂಬೋಧನೆಯನ್ನು ಅವರು ಪಡೆದಿದ್ದರು) | |
| 2. | ಪ್ರಾಣಿಗಳನ್ನು ಸುಲಭವಾಗಿ ಕೊಲ್ಲಲು. | |
| 3. | ಹಿಂದೂಸ್ತಾನಿ, ಕರ್ನಾಟಕ ಶೈಲಿ | |
| 4. | ಸಂಸ್ಕೃತದ ಸಿದ್ಧಾಂತ ಶಿಖಾಮಣಿ. ಕನ್ನಡದ ಬಸವೇಶ್ವರ ಮತ್ತು ಸಿದ್ಧಲಿಂಗೇಶ್ವರ ವಿಜಯ ಪುರಾಣ. (ಯಾವುದಾದರೂ ಒಂದು) | |
| 5. | ಕಿರೀಟ ನವಿಲುಗರಿ ಕೊಳಲನ್ನು ಧರಿಸಿದ ಗೋಪಾಲ (ಕೃಷ್ಣ) | |
| 6. | ಈತನಾರು. ಇಲ್ಲಿ ನಿಂತು ನೋಡುತ್ತಿರುವನು ? ಇಂದ್ರಗಿರಿಯ ನೆತ್ತಿಯಲ್ಲಿ ಏನು ಮಾಡುತ್ತಿರುವನು ? | |
| 7. | ತಮ್ಮ ಮನೆಯ ಹೆಣ್ಣುಮಕ್ಕಳು | |
| 8. | ಕೂಡಲ ಸಂಗಮದೇವ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯುವುದು :** | $11 \times 2 = 22$ |
| 9. | ಮೊದಲಿನಂತೆ ಮರಕ್ಕೆ ಹಸಿರು ಕಂಗೊಳಿಸಲಿ ಫಲಪುಷ್ಪ ಭಾರದಿಂದ ಬೀಗುವಂತಾಗಿ ನೆರಳನ್ನು ನೀಡಲಿ. | |
| 10. | ರಾಹುಲ್ ದ್ರಾವಿಡ್ ಎಲ್ಲಾ ರೀತಿಯ ಎಸೆತವನ್ನು ನಿಭಾಯಿಸುವ ವಿಕೆಟನ್ನು ಒಪ್ಪಿಸದೆ ದಿನವಿಡೀ ಕ್ರೀಸಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಹಾಗೂ ಕಲಾತ್ಮಕ ಆಟಗಾರಿಕೆ. | |
| 11. | ಅಂದವಾಗಿ ಶಿಸ್ತಿನಿಂದ ಸುತ್ತಿದ ಕಾವಿಬಣ್ಣದ ಪಟಗಾ ಎದ್ದು ಕಾಣುವ ವಿಭೂತಿ, ಗಂಧದ ಬೊಟ್ಟು, ಕೊರಳಲ್ಲಿ ರುದ್ರಾಕ್ಷಿಮಾಲೆ, ಕೊಂಚವೇ ಬಾಗಿದ ಕತ್ತು, ಕೈಯಲ್ಲಿ ಊರುಗೋಲು. | |
| 12. | ಕಾನೂನು ಬಾಹಿರವಾಗಿ ಹಾಸಿಗೆಯಲ್ಲಿ ಅಕ್ಕಿ ಚೀಲವನ್ನು ಸಾಗಿಸುತ್ತಿದ್ದುದು ಪೊಲೀಸರಿಗೆ ತಿಳಿದು ಹೋಯಿತೆಂದು ಭಾವಿಸಿ. (ಸನ್ನಿವೇಶವನ್ನು ವಿವರಿಸಬೇಕು) | |
| 13. | ಬಿಜಾಪುರ ಜಿಲ್ಲಾ ಪೊಲೀಸ್ ಅಧಿಕಾರಿ ಮುರುಗೋಡ ಭೀಮ್ಯಾ ತನ್ನಂತೆಯೇ ರಸ್ತೆಯ ಕಸಗುಡಿಸುವಂತೆ ಭೀಮ್ಯನ ತಂದೆಯ ಬಯಕೆಗೆ ವಿರುದ್ಧವಾಗಿ ಶಿಕ್ಷಕರಾಗಿದ್ದ ಅಜ್ಜ ತಮ್ಮ ಮನೆಗೆ ಕರತಂದು ಪ್ರೀತಿಯಿಂದ ಊಟಹಾಕಿ, ಶಾಲೆಗೆ ಕಳಿಸಿದ್ದು, ವಿಜಾಪುರದಲ್ಲಿ ಹಾಸ್ಟೆಲ್ ವ್ಯವಸ್ಥೆ ಮಾಡಿ ಉನ್ನತ ಶಿಕ್ಷಣಪಡೆಯಲು ಅವಕಾಶಕಲ್ಪಿಸಿ. ಮನುಷ್ಯನನ್ನಾಗಿ ಮಾಡಿದ್ದು. ಉನ್ನತ ಅಧಿಕಾರಿಯಾಗುವಂತೆ ಮಾಡಿದುದಕ್ಕಾಗಿ ಕೃತಜ್ಞತಾಭಾವನೆ. | |
| 14. | ಅಣ್ಣನಾದ ಭರತ ಚಕ್ರವರ್ತಿಯು ಹಮ್ಮಿನಿಂದ ಬಂದು ಸೆಣಸಿದುದು, ಗೆದ್ದ ರಾಜ್ಯವನ್ನು ಅಣ್ಣನಿಗೆ ಮರಳಿಸಿ ಬೆಟ್ಟದ ಕರೆಗೆ ಓಗೊಟ್ಟು, ಮುಕ್ತಿಯನ್ನು ಅರಸಿ ತಪಸ್ಸು ಮಾಡಲು ಬೆಟ್ಟಕ್ಕೆ ಬಂದು ನಿಂತ ಸಂದರ್ಭದ ಸಂಕ್ಷಿಪ್ತ ವಿವರಣೆ. | |
| 15. | ಸದ್ದು ಮಾಡದೆ, ಗದ್ದಲವನ್ನು ಎಬ್ಬಿಸದೆ ಬದುಕಿನ ರೇವನ್ನು ಸೇರುವುದು. ಕರ್ಪೂರ ಮೌನದಲ್ಲಿ ಕರಗುವಂತೆ, ದೀಪದ ಎದುರಿನಲ್ಲಿ ಕತ್ತಲೆ ಕರಗುವಂತೆ, ಸೂರ್ಯನ ಕಿರಣಕ್ಕೆ ಇಬ್ಬನಿ ಕರಗುವಂತೆ ಕಾರ್ಯಪ್ರವೃತ್ತರಾಗಿ. ಸಿಡುಕು ಮಿಡುಕನ್ನು ತೊರೆದು ಮೌನಿಯಾಗಿ. | |
| 16. | ಕಣಗಿಲೆ ಮತ್ತು ಒಣಗಿದ್ದಬಾಳೆ ಚಿಗುರುತ್ತವೆ. ಬರಡಾದ ಆಕಳು ಹಾಲು ಕರೆಯುವಂತಾಗುತ್ತದೆ. | |
| 17. | ನೆರಳು ನೀಡದ ಮರ, ದಯವಿಲ್ಲದ ಧನ, ಹಾಲು ಕರೆಯದ ಹಸು, ಗುಣವಿಲ್ಲದ ರೂಪ ಅನ್ನವೇ ಇಲ್ಲದೆ ಊಟದ ಬಟ್ಟಲು. (ಯಾವುದಾದರೂ ನಾಲ್ಕು) | |
| 18. | ಎಂಡು ಮೂರು ತಲೆಮಾರಿನಿಂದ ಬಂದ ಹಳೆಯ ಕುರ್ಚಿಯ ಮೇಲೆ ಕುಳಿತು ವೇದ ವಾಕ್ಯದಂತೆ ನಿಮಿತ್ಯ ಹೇಳುವುದು ಹಿರಿಯರ ಪುಣ್ಯವೆಂಬ ಭಾವನೆ. ಜೋಯಿಸರ ವಿನಃ ಯಾರೂ ಕೂರಬಾರದು ಎಂಬ ಧೋರಣೆ. ಮನಸ್ಸಿನಲ್ಲೇ ನಮಿಸುವ ಪೂಜ್ಯ ಭಾವನೆ. | |
| 19. | ತಾನು ಮೊದಲ ದಿನ ಮಾಡಿದ ಸಾಂಬಾರನ್ನು ಯಾರೂ ಕಲಸಬಾರದೆಂದು ನುಡಿದ ಅತ್ತೆಯ ಮಾತಿಗೆ ಎಲ್ಲರೂ ಸೊಸೆಯ ಮುಖವನ್ನು ನೋಡಿದ್ದರಿಂದ ಅವಮಾನಿತಳಾಗಿ ದೂರವಾಣಿಯಲ್ಲಿ ತನ್ನ ಅಳಲನ್ನು ಪತಿಯಲ್ಲಿ ತೋಡಿಕೊಂಡಿದುದು. ಮನೆಗೆ ಬಂದ ಪತಿ ಹೆಂಡತಿಯ ಮೇಲಿನ ಪ್ರೀತಿಯಿಂದ ಇವಳು ಮಾಡಿದ ಅಡುಗೆಯನ್ನು ಸವಿದುದು. ಸಾವಿತ್ರಿ ತಾನೇ ತಿಂದಾಗ ನಿಜ ವಿಚಾರ ತಿಳಿದು ತಪ್ಪಿನ ಅರಿವಾದುದು. | |
| | **ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯ :** | $2 \times 3 = 6$ |
| | ಕೃತಿ / ಕರ್ತೃ, ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ವಿವರಣೆ ಮತ್ತು ಸ್ವಾರಸ್ಯ | 2 ಅಂಕಗಳು |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

20. 'ನಿನ್ನಲ್ಲಿ ಹತ್ತು ಕಿಲೋವಾಟ್ ಶಕ್ತಿಯ ಬುದ್ಧಿ ಇದೆ'

*ಗದ್ಯ :* ಶಿಷ್ಯವತ್ಸಲ ರಾಮನ್

*ಕರ್ತೃ :* ಬಿ.ಪಿ. ರಾಧಾಕೃಷ್ಣ

*ಯಾರು–ಯಾರಿಗೆ ಸಂದರ್ಭದ ವಿವರಣೆ :* ಪಿಷಾನ ಪ್ರಯೋಗ ನಿರೀಕ್ಷಿತ ಫಲ ನೀಡದೆ ಖಿನ್ನನಾಗಿದ್ದಾಗ ರಾಮನ್ ಶಿಷ್ಯನನ್ನು ಸಂತೈಸಿ ಹುರಿದುಂಬಿಸಿ ನುಡಿದ ನುಡಿಗಳು.

*ಸ್ವಾರಸ್ಯ :* ಕೇಂಬ್ರಿಡ್ಜ್ ವಿಜ್ಞಾನಿಯಲ್ಲಿರುವ ಐದು ಕಿಲೋವಾಟ್ ಶಕ್ತಿಯುಳ್ಳ X-Ray tube ಗಿಂತ ಶಿಷ್ಯನಲ್ಲಿನ ಹತ್ತು ಹಿಲೋವಾಟ್ ಶಕ್ತಿಯ ಬುದ್ಧಿ ಹೆಚ್ಚಿನದು. ಸಲಕರಣೆಗಳಿಗಿಂತ ಬುದ್ಧಿಶಕ್ತಿ ಎಂಬ ನುಡಿಯಿಂದ ಆತ್ಮವಿಶ್ವಾಸವನ್ನು ತುಂಬಿದುದು.

21. 'ನನ್ನ ಇರುವಿಕೆಯ ಅರಿವಾಗುತ್ತದೆ'

*ಪದ್ಯ :* ಅರಿವು

*ಕರ್ತೃ :* ಸುಕನ್ಯಾ ಮಾರುತಿ

*ಯಾರು–ಯಾರಿಗೆ ಸಂದರ್ಭದ ವಿವರಣೆ :* ಕವಯಿತ್ರಿ ಓದುಗರಿಗೆ ಅನ್ಯಾಯಗಳನ್ನು ಪ್ರತಿಭಟಿಸಿ ತನ್ನ ಇರುವಿಕೆಯನ್ನು ಸಾಧಿಸಬೇಕೆಂದು ಮುಂದಾದ ಸನ್ನಿವೇಶ

*ಸ್ವಾರಸ್ಯ :* ಕೊಳಕಿನಿಂದ ಹೊರಬಂದು ಸ್ವಚ್ಛವಾಗಿ ಸಂಕುಚಿತತೆಯಿಂದ ಹೋರಬಂದು ವೈಶಾಲ್ಯ ಕಂಡಾಗ, ಸಣ್ಣತನದ ಅರಿವಾಗಿ ಕಣ್ಮುಚ್ಚಿ ಆನಂದಿಸಿದಾಗ ಆಗುವ ಅಸ್ಥಿತ್ವದ ಅರಿವು.

**ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ವಿವರಿಸಿ ಬರೆಯುವುದು :** 2 × 3 = 6

22. ಕುವೆಂಪು

*ಜನ್ಮಸ್ಥಳ :* ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ

*ಕಾಲ :* ೧೯೦೪–೧೯೯೪

*ಕೃತಿ :* ಚಂದ್ರಮಂಚಕೆ ಬಾ ಚಕೋರಿ, ನವಿಲು, ಪಕ್ಷಿಕಾಶಿ, ಬೆರಳ್‌ಗೆ ಕೊರಳ್, ಶೂದ್ರ ತಪಸ್ವಿ, ಜಲಗಾರ, ರಸೋವೈಸಃ, ವಿಭೂತಿ ಪೂಜೆ, ದ್ರೌಪದಿಯ ಸಿರಿಮುಡಿ, ನನ್ನ ದೇವರು ಮತ್ತು ಇತರ ಕತೆಗಳು, ಕಾನೂನು ಹೆಗ್ಗಡತಿ ಮಲೆಗಳಲ್ಲಿ ಮದುಮಗಳು, ಶ್ರೀ ರಾಮಾಯಣದರ್ಶನಂ. (ಯಾವುದಾದರೂ ಒಂದು ಕೃತಿ)

23. ಎಂ. ಗೋಪಾಲಕೃಷ್ಣ ಅಡಿಗ

*ಜನ್ಮಸ್ಥಳ :* ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ 'ಮೊಗೇರಿ'

*ಕಾಲ :* ೧೯೧೮–೧೯೯೨

*ಕೃತಿ :* ಭಾವತರಂಗ, ಚಂಡೆ ಮದ್ದಳೆ, ಭೂಮಿಗೀತ, ನಡೆದು ಬಂದ ದಾರಿ, ಅನಾಥೆ, ಆಕಾಶದೀಪ, ಸಮಗ್ರ ಗದ್ಯ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಪದ್ಯಭಾಗ ಪೂರ್ಣ ಮಾಡುವುದು :** | 1 × 3 = 3 |
| 24. | ಯುಗದ ಆದಿಯು ಬಂತು ಸೊಗದ ಸುಗ್ಗಿಯ ತಂತು<br>ಜಗಕೆಲ್ಲ ಹೊಸ ಕಳೆಯು ತುಂಬಿತೆಂತು !<br>ಬಗೆಬಗೆಯ ಬಣ್ಣಗಳ ಬರೆದ ಚಿತ್ರದ ಹಾಗೆ<br>ನೆಲದಮ್ಮ ನವವಧುವೆ ಆದಳಿಂತು !<br>**ಅಥವಾ**<br>ಮೈಕೊಡವಿ ಎದ್ದ ಜಗ ಖಗ ಪಕ್ಷಿ ಪ್ರಾಣಿಗಳು<br>ಲಗುಬಗೆಯ ದಗದಕ್ಕೆ ಹೊರಟಂತಿದೆ<br>ಹೊಸತು ಜೀವೋಲ್ಲಾಸ ಚಿಗಿತ ಭಾವವಿಲಾಸ<br>ನೆಲ ಮುಗಿಲ ವಾಲಗವೆ ನಡೆದಂತಿದೆ. | |
| | **ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | 2 × 4 = 8 |
| | ಮೌಲ್ಯಾಂಶ ಮತ್ತು ವಿಷಯ ಸಂಗ್ರಹಕ್ಕೆ | 3 ಅಂಕ |
| | ಭಾಷಾಶೈಲಿ ಹಾಗೂ ಭಾಷಾ ಶುದ್ಧಿಗೆ | 1 ಅಂಕಗಳು |
| | ಒಟ್ಟು | 4 ಅಂಕಗಳು |
| 25. | ಸಹ್ಯ ಪರ್ವತವಾದ ಸಹ್ಯಾದ್ರಿ ಅಸಹ್ಯ ಪರ್ವತವಾಗುತ್ತಿದೆ. ದಕ್ಷಿಣ ಭಾರತ ಹವಾಮಾನದಲ್ಲಿ ಏರುಪೇರು, ಅತಿವೃಷ್ಟಿ, ಅನಾವೃಷ್ಟಿ, ಕುಡಿಯುವ ನೀರಿನ ಅಭಾವ, ಸಾಂಕ್ರಾಮಿಕ ರೋಗ, ಚಂಡಮಾರುತ, ಪ್ರವಾಹದ ಹಾವಳಿ, ಭೂಕುಸಿತ ಅಂತರ್ಜಲ ಕಡಿಮೆಯಾಗುತ್ತಿರುವುದು, ನದಿಗಳು ಬತ್ತುತ್ತಿರುವುದು. ವನ್ಯ ಮೃಗಗಳು ಆಶ್ರಯ ತಪ್ಪಿ ಹೊಲ ಗದ್ದೆಗಳಿಗೆ ದಾಳಿ ಆರಂಭಿಸುತ್ತಿರುವುದು. ಕ್ಯಾಸನೂರು ರೋಗಾಣು ಕಾಡುಬಿಟ್ಟು ನಾಡಿಗೆ ಹಬ್ಬುತ್ತಿರುವುದು. ಏಕ ಜಾತಿ ಸಸ್ಯಗಳಿಂದಾಗಿ ಕೀಟಗಳ ಹಾವಳಿ, ಹೆಚ್ಚುತ್ತಿರುವ ಕಾಡು ರೋಗಗಳು, ಇಂತಹ ಕಾಡಿನಲ್ಲಿ ಮೇಯಲು ಹೋದ ಗರ್ಭಿಣಿ ಜಾನುವಾರುಗಳ ಗರ್ಭಪಾತ ಹೆಚ್ಚುತ್ತಿರುವುದು.<br>**ಅಥವಾ**<br>ಏರುತ್ತಿರುವ ಜನಸಂಖ್ಯೆಯಿಂದಾಗಿ ಕೃಷಿ ಭೂಮಿಯ ವಿಸ್ತರಣೆ, ಅರಣ್ಯಗಳಲ್ಲಿ ಅತಿಕ್ರಮ ಸಾಗುವಳಿ, ಅರಣ್ಯದ ಹುಟ್ಟುವಳಿಗಳಾದ ಮೆಣಸು, ದಾಲಚಿನ್ನಿ ಜೇನು, ಧೂಪ, ದಂತ, ರಾಳ, ಬಗಿನೆ, ಬಿದುರುಗಳಿಗೆ ಬೇಡಿಕೆ ಹೆಚ್ಚಾದ್ದರಿಂದ ಹಣದಾಸೆಗಿ ಕಾಡು ದೋಚುವವರ ಸಂಖ್ಯೆಯೂ ಹೆಚ್ಚುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಹೆಚ್ಚುತ್ತಿರುವ ಉದ್ದಿಮೆಗಳಿಂದಾಗಿ ಖನಿಜ, ವಿದ್ಯುತ್ತಿಗಾಗಿಗ ಸರ್ಕಾರವೇ ಲಗ್ಗೆ ಹಾಕಿದ್ದು, ಕಾಪಾಡಬೇಕಾದ ಮಾಲೀಕರೇ ನೂರು ತೋಳುಗಳಿಂದ ಕಾಡಿಗೆ ಕೊಡಲಿ ಬೀಸಿದ್ದು ದೋಚಲು ಸಿದ್ಧರಾದವರ ಕೈಗೆ ಕೊಡಲಿ, ಗುದ್ದಲಿ ಸಿಡಿಮದ್ದು ಸುಲಭವಾಗಿ ದೊರಕಿದ್ದು. | |
| 26. | ಉತ್ತರ ಕುಮಾರನಿಂದ ಮನಸ್ಸು ಈಜಲು ಸಾಧ್ಯವಾದ ಸಾಗರ ಸದೃಶ್ಯವಾದ ಶತ್ರು ಸೈನ್ಯದ ವರ್ಣನೆ, ಪೃಥ್ವಿಯೇ ಜನ್ಮ ಕೊಟ್ಟಂತಹ ಈ ಸೈನ್ಯವನ್ನು ಪರಶಿವನಲ್ಲದೆ ಅನ್ಯರು ಜಯಿಸರೆಂದು ಸೈನ್ಯಕ್ಕೆ ನಮಿಸುವುದು. ಉತ್ತರವೆಂಬಂತೆ ಅರ್ಜುನನ ರಥವನ್ನು ಸ್ವಲ್ಪವೇ ದೂರ ಮುಂದೆ ಚಲಿಸಲು ಉತ್ತರನು ಈ ಸಾರಥಿ ನನ್ನನ್ನು ಸಾಯಿಸದೆ ಬಿಡನೆಂದು ರಥದ ಹಿಂದಕ್ಕೆ ಸರಿದು ಉತ್ತರೀಯವನ್ನು ಸರಿಪಡಿಸಿಕೊಳ್ಳುತ್ತಾ ತಲೆಕೆದರಿರುದುದನ್ನು ಲೆಕ್ಕಿಸದೆ ರಥದಿಂದ ಧುಮುಕಿ ಒಂದೇ ಉಸುರಿಗೆ ಓಡುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಉತ್ತರನ ವರ್ತನೆಗೆ ಅರ್ಜುನನು ಮನಃಪೂರ್ವಕವಾಗಿ ನಕ್ಕು ಉತ್ತರನನ್ನು ಗದರಿ ಲಲನೆಯರ ಮುಂದೆ ಬಾಯ್ಗೆ ಬಂದಂತೆ ಕೊಚ್ಚಿಕೊಂಡ ಪೌರುಷ ಯುದ್ಧದಲ್ಲಿ ಏನಾಯ್ತು ಶತ್ರುಗಳ ಸಂಹರಿಸದೆ ಅಂಜುಬುರುಕ ನರಿಯಂತೆ ಹಲ್ಲುಕಿರಿದರೆ ಬಿಡೆನು ಎಂದು ಅರ್ಜುನನು ಹೇಳಿದೊಡನೆಯೇ ಉತ್ತರನು ಉತ್ತರವೆನ್ನುವಂತೆ ಯುದ್ಧದಿಂದ ಹಿಂದಿರುಗಿದರೆ ಪಾಪವನ್ನು ಬ್ರಾಹ್ಮಣರು ಕಳೆಯುತ್ತಾರೆ. ಈ ಭೂಮಿಯನ್ನು ಪ್ರತ್ಯಕ್ಷವಾಗಿಯೇ ಅಶ್ವಮೇಧಯಾಗ ಮಾಡಬಹುದು. ನಮಗೆ ದೇವಲೋಕದ ಅಪ್ಸರೆಯರು ಬೇಡ ನಮ್ಮ ಅರಮನೆಯ ನಾರಿಯರೇ ಸಾಕು ನಮ್ಮ ರಾಜ ಪದವಿಯೇ ನಮಗೆ ಇಂದ್ರ ಪದವಿಯು ಎಂದನು. | |
| | ***ಅಥವಾ*** | |
| | ಉತ್ತರನು ಅಗಾಧವಾದ ಸೈನ್ಯವನ್ನು ಕಂಡು ಹೆದರಿ ಅದನ್ನು ವರ್ಣಿಸುವ ಪರಿ, ಅರ್ಜುನನು ರಥವನ್ನು ಸಾಗಿಸಿದೊಡನೆ ಪ್ರತಿಕ್ರಿಯಿಸಿದ್ದು, ಅರಮನೆಯ ನಾರಿಯರ ಮುಂದೆ ಬಾಯ್ಗೆ ಬಂದಂತೆ ಕೊಚ್ಚಿಕೊಳ್ಳುವುದು. ಬ್ರಾಹ್ಮಣರು ಯುದ್ಧದಿಂದ ಹಿಂದಿರುಗಿದ ಪಾಪವನ್ನು ಕಳೆಯುತ್ತಾರೆ. ನಮಗೆ ಅಪ್ಸರೆಯರು ಬೇಡ ಅರಮನೆಯ ನಾರಿಯರು ಸಾಕು ನಮ್ಮ ರಾಜ ಪದವಿಯೇ ಇಂದ್ರ ಪದವಿ ಎನ್ನುವುದು ಉತ್ತರ ಕುಮಾರನ ಪುಕ್ಕಲುತನ ಹಾಗೂ ಸ್ತ್ರೀಲೋಲುಪತೆಯನ್ನು ಬಿಂಬಿಸುತ್ತದೆ.<br>ಉತ್ತರನ ವರ್ತನೆಗೆ ಅರ್ಜುನನು ನಕ್ಕು ಆಡುವ ನುಡಿಗಳು ಆತನ ಪೌರುಷವನ್ನು ಎತ್ತಿ ಹಿಡಿಯುತ್ತದೆ. | |
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | $12 \times 1 = 12$ |
| 27. | (ಬಿ) ಕೃತಜ್ಞ | |
| 28. | (ಎ) ದ್ವಿರುಕ್ತಿ | |
| 29. | (ಸಿ) ಪ್ರತಿ + ಉತ್ತರ | |
| 30. | (ಬಿ) ಅಚ್ಚರಿ | |
| 31. | (ಡಿ) ದ್ವಿಗು | |
| 32. | (ಸಿ) ದೆಸೆಯಿಂದ | |
| 33. | (ಬಿ) ಮನುಷ್ಯ | |
| 34. | (ಎ) ಆರು | |
| 35. | (ಸಿ) ರೂಪಕ | |
| 36. | (ಡಿ) ಕುರುಡ | |
| 37. | (ಎ) ಕ್ರಿಯಾ ಪ್ರಕೃತಿ | |
| 38. | (ಸಿ) ಕಾಶಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಅಪಠಿತ ಗದ್ಯ :** | 4 × 1 = 4 |
| 39. | ಅಗ್ನಿ, ವಾಯು, ಪೃಥ್ವಿ, ನೀರು ಹಾಗೂ ಆಕಾಶ | |
| 40. | ಸಮತೋಲನ ಆಹಾರವನ್ನು ಸೇವಿಸಿ | |
| 41. | ಹಾಡು, ಹಸೆ, ಹರಿಕತೆ, ಭಜನೆ ಮುಂತಾದವುಗಳ ಹೆಸರಿನಲ್ಲಿ ಕಲೆ ಹಾಗೂ ಸಾಹಿತ್ಯವನ್ನು ಪೋಷಿಸಿ ಬೆಳೆಸಿ | |
| 42. | ಪ್ರಕೃತಿ ಆರಾಧನೆ, ಆರೋಗ್ಯ ರಕ್ಷಣೆ, ಕಲೆ ಹಾಗೂ ಸಾಹಿತ್ಯದ ಪೋಷಣೆ ಹಾಗೂ ಬೆಳವಣಿಗೆ | |
| 43. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | ಗಾದೆಯ ಮಹತ್ವ ಮತ್ತು ಅರ್ಥ | 1 ಅಂಕ |
| | ಉದಾಹರಣೆಯೊಂದಿಗೆ ಸಮರ್ಥನೆ | 2 ಅಂಕ |
| | ಒಟ್ಟು | 3 ಅಂಕಗಳು |
| 44. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 1 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿ | 1 ಅಂಕ |
| | ಒಟ್ಟು | 4 ಅಂಕಗಳು |
| | **ಅಥವಾ** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣ | 1 ಅಂಕ |
| | ಪತ್ರದ ಒಡಲು | 1 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ಗೆ ವಿಳಾಸ | 1 ಅಂಕ |
| | ಭಾಷಾಶೈಲಿ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 45. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 1 ಅಂಕಗಳು |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿ | 1 ಅಂಕ |
| | ಒಟ್ಟು | 4 ಅಂಕಗಳು |